ಅಥವಾ ಪ್ರಥಮ ಆದ್ಯತೆಯಿಂದಲೋ ಎಂಬಂತೆ ತಯಾರುಗೊಳ್ಳುವ ಪ್ರಕ್ರಿಯೆ. ರಂಗಭೂಮಿ ಮತ್ತು ಪ್ರದರ್ಶನ ಕಲೆಗೆ ಸಹಾಯವಾಗಲಿ ಅಂತ 'ಆದಿಶಕ್ತಿ ರೆಪರ್ಟರಿ'ಯ ವರ್ಕ್‌ಶಾಪುಗಳಿಗೆ ಹೋಗುವಿರಿ. ಪ್ರತಿದಿನದ ನೃತ್ಯಾಭ್ಯಾಸ, ಕಾವ್ಯ ಕುಸುರಿಗೆ ಶಕ್ತಿಯುತವಾಗಲಿಕ್ಕೆ ವಿಸ್ತಾರವಾದ ಓದು, ಅಧ್ಯಾತ್ಮದಲ್ಲಿ ಅದರದೇ ಆದ ಅಭ್ಯಾಸಗಳು ಇತ್ಯಾದಿ. ಇವೆಲ್ಲದರ ಕುರಿತು ಸಹ ಹೇಳಿ.

ಹೌದು, ನಾನು ಇತ್ತೀಚೆಗೆ 'ಆಮ್ ಐ ಅ ಮಾಸ್ ಪ್ರೊಡಕ್ಷನ್ ಮಷಿನ್' ಅನ್ನೋ ನಾಟಕವನ್ನು ನಿರ್ದೇಶಿಸಿದೆ. ಶೋಭನಾ ಅದರಲ್ಲಿ ಅಭಿನಯಿಸಿದ್ದರು. ಮೊದಲು ಅವರು ನಿರ್ದೇಶನ ಮಾಡಿ ಅಂತ ಹೇಳಿದಾಗ ನಾನು ಒಪ್ಪಿಕೊಂಡಿರಲಿಲ್ಲ. ಅದು ಅವರದೇ ಬದುಕಿನ ಕಥೆ ಆಗಿತ್ತು. ನಾನೇ ಸ್ವಂತದ ಪ್ರೊಡಕ್ಷನ್‌ಗಳನ್ನು ಮಾಡಿದ್ದೀನಿ. ಇದು ಹೇಗಾಗತ್ತೋ ಅನ್ನೋ ಹಿಂಜರಿಕೇಲಿ ಇದ್ದೆ. ಕಲಾವಿದೆ ಶರಣ್ಯ ರಾಂಪ್ರಕಾಶ್ 'ಒಮ್ಮೆ ಕಥೆ ಕೇಳಿ, ಆಮೇಲೆ ನಿರ್ಧಾರ ಮಾಡಿ' ಅಂದ್ರು. ಆ ಕಥೆ ಕೇಳ್ತಾ ಹೋದ ಹಾಗೆ ನಾನಿದನ್ನ ಮಾಡ್ಲೇಬೇಕು ಅಂತ ಅನಿಸ್ತು. ರಂಗದ ಮೇಲೆ ಕೂಡ ಅವರ ಬದುಕೇ ಹಾಡಾಗಿ ಬಂದಿರುವ ಹಾಗೆ ಆ ನಾಟಕ ಮೂಡಿಬಂತು. ಲಿಂಗತ್ವದ ಹಲವಾರು ಆಯಾಮಗಳು ಆ ನಾಟಕದಲ್ಲಿ ಮೂಡಿಬಂದಿದ್ದವು. ಜನರೂ ಕೂಡ ತುಂಬಾ ಇಷ್ಟಪಟ್ಟರು.

◆ ಕ್ವೀರ್ ಚಳವಳಿಗಳಲ್ಲಿ ಕೂಡ ನಿಮ್ಮನ್ನು ನೀವು ತೊಡಗಿಸಿಕೊಳ್ಳುತ್ತಾ ಬಂದಿದ್ದೀರಿ. ಅದರಲ್ಲೂ ಕಲೆಯನ್ನೇ ಹೋರಾಟದ ಸಾಧನವನ್ನಾಗಿ ಬಳಸುತ್ತಾ ಬಂದಿದ್ದೀರಿ ಅಂತ ನನಗನಿಸುತ್ತದೆ. ಕಲೆಯ ಮೂಲಕ ಈ ಕ್ವೀರ್ ಚಳವಳಿಗಳನ್ನು ಮುಂದೊಯ್ಯುವ ನಿಮ್ಮ ವಿಚಾರದ ಬಗ್ಗೆ ಹೇಳಬಹುದಾ?

ಕಲೆಯ ಮೂಲಕ ಹೋರಾಟ ಸಾಧ್ಯ ಎನ್ನುವ ವಿಚಾರವನ್ನು ನಾನು ನಂಬುತ್ತೇನೆ. ಒಮ್ಮೊಮ್ಮೆ ಬೀದಿ ಹೋರಾಟಗಳಲ್ಲಿ ಅದರ ಒಳಗಿನ ರಾಜಕೀಯಗಳು, ಅವು ತಂದೊಡ್ಡುವ ಹಲವಾರು ಸವಾಲುಗಳು ನನಗೇಕೋ ಈ ಹಾದಿ ಸರಿಹೊಂದುತ್ತಿಲ್ಲ ಅಂತಲೇ ಅನಿಸ್ತಾ ಇತ್ತು. ನ್ಯಾಯಾಂಗ ಕೊಡಬಹುದಾದ ಕಾನೂನಾತ್ಮಕ ರಕ್ಷಣೆಯನ್ನು ನಾನಿಲ್ಲಿ ಅಲ್ಲಗಳೀತಾ ಇಲ್ಲ. ಅದೇ ತುಂಬಾ ಮುಖ್ಯ ಕೂಡ ಹೌದು. ಈಗ ನೋಡಿ, ಸೆಕ್ಷನ್ 377ರ ತೀರ್ಪು ಬಂದ ಮೇಲೆ ಕೂಡ ಜನರು ಹೊಮೊಫೋಬಿಕ್, ಟ್ರಾನ್ಸ್ ಫೋಬಿಕ್ ಆಗಿಯೇ ಇದ್ದಾರೆ ಅಲ್ವಾ? ಆದ್ದರಿಂದ ಇವೆಲ್ಲವಕ್ಕೆ ಉತ್ತರವಾಗಿ ಕಲೆ ನನಗೆ ಕಾಣಿಸಿದೆ. ಕಲೆಯ ಮೂಲಕ ನಾವು ಜಾಗೃತಿ ಮೂಡಿಸಬಹುದು ಅಂತ ನನಗೆ ಬಲವಾಗಿ ಅನಿಸತ್ತೆ. ಮನಸ್ಸುಗಳ ಜೊತೆಗಿನ ಸಂವಾದಕ್ಕೆ ಕಲೆಯೇ ಪ್ರಬಲವಾದ ಮಾಧ್ಯಮ.

◆ ಇವತ್ತಿನ ಕ್ವೀರ್ ಚಳವಳಿಯನ್ನು ಗಮನಿಸಿದರೆ ನಿಮಗೆ ಇನ್ನೂ ಏನೇನು ಕೆಲಸಗಳು ಆಗಬೇಕು ಅಂತ ಅನಿಸತ್ತೆ?

ಸೆಕ್ಷನ್ 377 ನಮಗೆ ಕೆಲವು ಹಕ್ಕುಗಳನ್ನು ಕೊಟ್ಟಿದೆ. ಒಬ್ಬ ವ್ಯಕ್ತಿ ತಾನು ಪ್ರೀತಿಸಿದ ವ್ಯಕ್ತಿಯ ಜೊತೆಗೆ ಮದುವೆಯಾಗುವ ಹಕ್ಕು, ಮಕ್ಕಳನ್ನು ದತ್ತು ತೆಗೆದುಕೊಳ್ಳುವ ಹಕ್ಕು, ಶಿಕ್ಷಣ ಮತ್ತು ಕ್ರೀಡೆಯಲ್ಲಿ ಮೀಸಲಾತಿ, ಇತ್ಯಾದಿ ಎಲ್ಲಾ ಆಗಬೇಕು. ಐಟಿ ಕ್ಷೇತ್ರದಲ್ಲಿ ಸಾಕಷ್ಟು ಒಳಗೊಳ್ಳುವಿಕೆಯ ಕಾರ್ಯಕ್ರಮಗಳು ಆಗುತ್ತಿರೋದು ಆಶಾದಾಯಕ ಬೆಳವಣಿಗೆ ಅಂತ ಹೇಳಬಹುದು.

◆ ಎರಡು ರೀತಿಯಲ್ಲಿ ಇದು ನಮಗೆ ಒಡೆದು ಕಾಣಿಸತ್ತೆ. ಸಮುದಾಯದ ಹೋರಾಟಗಳನ್ನು ಗಮನಿಸಿದಾಗ ಇವತ್ತಿಗೂ ಗ್ರಾಮೀಣ ಪ್ರದೇಶದ ಜನರಿಗೆ ಕ್ವೀರ್ ಸಮುದಾಯದ ಜನರ ಹಕ್ಕುಗಳ ಬಗ್ಗೆ, ಹೋರಾಟಗಳ ಬಗ್ಗೆ ಸಿಗಬೇಕಾದ ಮಾಹಿತಿಯ ಸಂಪನ್ಮೂಲಗಳ ಕೊರತೆಯಿಂದ ಹಿಡಿದು ನಗರಗಳಲ್ಲಿ ಸುಲಭವಾಗಿ ಸಿಗುವ ಸಪೋರ್ಟ್ ಸಿಸ್ಟಮ್ ಕೂಡ ಅಲ್ಲಿ ಸಿಗದಿರುವ ಪರಿಸ್ಥಿತಿ ಇದೆ. ಈ ರೀತಿ ನಗರ ಕೇಂದ್ರಿತ ಹಾಗೂ ನಗರೇತರ ಜನರ ನಡುವೆ ಸೃಷ್ಟಿಯಾಗಿರುವ ಕಂದಕವನ್ನು ನಿವಾರಿಸಿಕೊಳ್ಳುವಲ್ಲಿ ಏನೇನು ಕೆಲಸಗಳು ಆಗಬೇಕಿವೆ?

ನೀವು ಹೇಳಿದ ಹಾಗೆ ಹಳ್ಳಿಗಳಲ್ಲೂ ಕೂಡ ಅದೆಷ್ಟೋ ಜನ ಲಿಂಗತ್ವ ಅಲ್ಪಸಂಖ್ಯಾತರಿದ್ದಾರೆ. ಬೆಂಗಳೂರಂಥ